ಸಹ ಏನೂ ಪ್ರಯೋಜನವಾಗಲಿಲ್ಲ. ಆಗ ಆ ಬ್ರಹ್ಮರಾಕ್ಷಸನೇ ಹೀಗೆ ಹೇಳಿದನಂತೆ: "ನಿನ್ನಿಂದ ನನ್ನ ಉಚ್ಚಾಟನೆ ಆಗದು. ಸುಮ್ಮನೆ ಏಕೆ ಕಷ್ಟಪಡುತ್ತೀಯೆ? ರಾಮಾನುಜನನ್ನು ಬಿಡು. ಆತನ ಚಿಕಿತ್ಸೆಯಿಂದ ನಾನು ಈಕೆಯನ್ನು ಬಿಟ್ಟುಹೋಗುತ್ತೇನೆ." ಗತ್ಯಂತರವಿಲ್ಲದೆ ಯಾದವರು ಒಪ್ಪಿದರು. ರಾಮಾನುಜರಿಗೆ ಆ ಬ್ರಹ್ಮರಾಕ್ಷಸವನ್ನು ಓಡಿಸುವಂತೆ ಕೇಳಿಕೊಂಡರು. ಆಗ ರಾಮಾನುಜರು ಹೇಳಿದರು, "ಗುರುವೇ, ನಾನು ಅಶಕ್ತ. ಮಂತ್ರಮಾಟಗಳನ್ನು ಕಲಿತವನಲ್ಲ. ಉಪಾಸನೆಯನ್ನು ಮಾಡಿ ಅಂಥ ಯಾವ ಶಕ್ತಿಯನ್ನೂ ಪಡೆದವನಲ್ಲ. ನನಗೆ ತಿಳಿದಿರುವುದು ಎರಡೇ – ತಮ್ಮ ಮೇಲೆ ಗುರುಭಕ್ತಿ ಹಾಗೂ ನಾರಾಯಣನಲ್ಲಿ ಪ್ರಪತ್ತಿ."

ಅದಕ್ಕೆ ಗುರುಗಳು ಹೇಳಿದರು, "ಇದು ನಿನ್ನ ಗುರುವಿನ ಆಜ್ಞೆ, ನಿನ್ನ ಕರ್ತವ್ಯ. ಇದನ್ನು ಅವಶ್ಯವಾಗಿ ಮಾಡಲೇಬೇಕು." ಹೀಗೆ ಯಾದವರು ಆಜ್ಞೆ ಮಾಡಿದಾಗ, ರಾಮಾನುಜರು ಈ ಶ್ಲೋಕವನ್ನು ಪಠಿಸಿದರು: **ಗುರವೇ ಸರ್ವಲೋಕಾನಾಂ ಭಿಷಜೇ ಭವರೋಗಿನಾಂ। ನಿಧಯೇ ಸರ್ವವಿದ್ಯಾನಾಂ ತಸ್ಮೈ ಶ್ರೀ ಗುರವೇ ನಮಃ ॥** – "ಭಗವಂತನೇ, ನೀನು ಸರ್ವಲೋಕಗಳಿಗೂ ಗುರುವಾಗಿದ್ದೀಯೆ, ಸಂಸಾರರೋಗದಿಂದ ನರಳುತ್ತಿರುವವರೆಲ್ಲರಿಗೂ ವೈದ್ಯನಾಗಿದ್ದೀಯೆ. ಸರ್ವವಿದ್ಯೆಗಳ ಆಗರನಾಗಿದ್ದೀಯೆ. ಅಂತಹ ಜಗದ್ಗುರುವಾದ ನಿನಗೆ ನಮಸ್ಕಾರ." ಹೀಗೆ ಪಠಿಸಿ, ಕೈಯಲ್ಲಿ ನೀರನ್ನು ಹಿಡಿದುಕೊಂಡರು. "ಭಗವಂತನೇ ನನ್ನ ರಕ್ಷಕನಾಗಿರಲು ನನಗೆ ಇನ್ನೇತರ ಭಯ" ಎಂದು ಮನಸ್ಸಿನಲ್ಲಿಯೇ ಚಿಂತಿಸಿದರು. ಬ್ರಹ್ಮರಾಕ್ಷಸನಿಗೆ ಹೀಗೆ ಹೇಳಿದರು: "ಹೇ ಬ್ರಹ್ಮರಾಕ್ಷಸ, ಕೇಳು. ನನ್ನಲ್ಲಿ ನಿಶ್ಚಲವಾದ ಗುರುಭಕ್ತಿ, ಪರಮಾತ್ಮನಲ್ಲಿ ಕಲ್ಮಷರಹಿತ ಪ್ರಪತ್ತಿ ಇರುವುದು ಸತ್ಯವೇ ಆಗಿದ್ದಲ್ಲಿ, ಈ ರಾಜಕುಮಾರಿಯನ್ನು ಬಿಟ್ಟುಹೋಗು." ಹೀಗೆ ಹೇಳಿ ತೀರ್ಥವನ್ನು ಪ್ರೋಕ್ಷಿಸಿದಾಗ, ಆ ಬ್ರಹ್ಮರಾಕ್ಷಸನ ನಿರ್ಗಮನವಾಯಿತು. ಅದರ ಗುರುತಿಗೆ ಹತ್ತಿರದಲ್ಲಿದ್ದ ಅರಳಿಮರದ ಒಂದು ರೆಂಬೆ ದಢಾರನೆ ಮುರಿದುಹೋಯಿತು.

ಶ್ರೀರಂಗದಲ್ಲಿ ಯಾಮುನಾಚಾರ್ಯರು ಶ್ರೀವೈಷ್ಣವರ ಮುಖ್ಯಸ್ಥರಾಗಿದ್ದರು. ವಿಶಿಷ್ಟಾದ್ವೈತವನ್ನು ಒಳಗೊಂಡ ಅನೇಕ ಸಂಸ್ಕೃತ ಗ್ರಂಥಗಳನ್ನು ಅವರು ರಚಿಸಿದ್ದರು. ಶ್ರೀವೈಷ್ಣವ ತತ್ತ್ವದ ಪ್ರಸಾರಕಾರ್ಯದಲ್ಲಿ ಅವರಿಂದ ಇನ್ನೂ ಬಹಳಷ್ಟು ಕೆಲಸ ನಡೆಯಬೇಕಾಗಿತ್ತು. ಆದರೆ ಅವರಿಗೆ ತಮ್ಮ ಮುಪ್ಪು ಸಮೀಪಿಸುತ್ತಿರುವುದು ಗೋಚರವಾಯಿತು. ಈ ಪರಂಪರೆಯನ್ನು ಉಳಿಸಿಕೊಂಡು ಹೋಗುವವರು ಯಾರು ಎಂದು ಅವರು ಬಹಳಷ್ಟು ಆಲೋಚಿಸತೊಡಗಿದರು. ಆಗ ಅವರಿಗೆ ರಾಮಾನುಜರ ಬಗ್ಗೆ ತಿಳಿಯಿತು. ಒಮ್ಮೆ ಅವರು ಕಾಂಚೀಪುರಕ್ಕೆ ಬಂದರು. ವರದರಾಜಸ್ವಾಮಿ ದೇವಸ್ಥಾನಕ್ಕೆ ಹೋಗುತ್ತಿದ್ದರು. ದಾರಿಯಲ್ಲಿ ಸುಂದರರೂಪದ ಒಬ್ಬ ಯುವಕನನ್ನು ಕಂಡರು. ಎತ್ತರವಾಗಿದ್ದ ಮೈಕಟ್ಟಿನ ಅವರೇ ರಾಮಾನುಜರು. ಅವರನ್ನು ನೋಡಿದೊಡನೆಯೇ, ಇವರೇ ತಾವು ಅನ್ವೇಷಿಸುತ್ತಿದ್ದ ವೈಷ್ಣವಸಂಪ್ರದಾಯದ ಮುಂದಿನ ನಾಯಕ ಎಂದು ಯಾಮುನಾಚಾರ್ಯರು ನಿಶ್ಚಯಿಸಿಬಿಟ್ಟರು. ವರದರಾಜಸ್ವಾಮಿಯ ಎದುರಿಗೆ ನಿಂತು ಪ್ರಾರ್ಥಿಸಿದರು : "ದೇವ, ರಾಮಾನುಜರು ನಮ್ಮ ಸಂಪ್ರದಾಯದ ದೀಪವನ್ನು ಬೆಳಗುವಂತೆ ಮಾಡು."

ಇತ್ತ ಯಾದವಪ್ರಕಾಶರಿಗೆ ರಾಮಾನುಜರ ವಿಷಯದಲ್ಲಿ ಅಸಮಾಧಾನ ಬೆಳೆಯುತ್ತಲೇ ಹೋಯಿತು. ಅದರಲ್ಲೂ 'ಸತ್ಯಂ ಜ್ಞಾನಮ್ ಅನಂತಂ ಬ್ರಹ್ಮ' – ಈ ವಾಕ್ಯದ ಸೊಗಸಾದ ವಿವರಣೆಯನ್ನು ರಾಮಾನುಜರು ಹೇಳಿದಮೇಲಂತೂ ಅಸೂಯೆ ಇನ್ನೂ ಹೆಚ್ಚಾಯಿತು. "ಇನ್ನು ಮುಂದೆ ಪಾಠಕ್ಕೆ ಬರಬೇಡಿ" ಎಂದು ಸ್ಪಷ್ಟವಾಗಿ ಹೇಳಿಬಿಟ್ಟರು. ಇದರಿಂದ ರಾಮಾನುಜರು ಬಹಳಷ್ಟು ನೊಂದುಕೊಂಡರು. ಅಂದಿನಿಂದ ವರದರಾಜಸ್ವಾಮಿಯ ಕೈಂಕರ್ಯದಲ್ಲಿ ತಮ್ಮ ಇಡೀ ಕಾಲವನ್ನು ಕಳೆಯಲಾರಂಭಿಸಿದರು.

ರಾಮಾನುಜರು ಈ ರೀತಿಯಲ್ಲಿ ಯಾದವಪ್ರಕಾಶರಿಂದ ದೂರವಾದ ಸಂಗತಿ ಯಾಮುನಾಚಾರ್ಯರಿಗೆ ತಿಳಿಯಿತು. ಅವರು ತಮ್ಮ ಅಂತ್ಯಕಾಲ ಸಮೀಪಿಸುತ್ತಿರುವುದನ್ನು ತಿಳಿದಿದ್ದರು. ಆದ್ದರಿಂದ ಮಹಾಪೂರ್ಣ ಎಂಬ ಶಿಷ್ಯರನ್ನು ಕರೆದು, ಕಂಚಿಗೆ ಹೋಗಿ ರಾಮಾನುಜರನ್ನು ಒಡನೆಯೇ ಕರೆದುಕೊಂಡು ಬರುವಂತೆ ಹೇಳಿಕಳಿಸಿದರು. ಮಹಾಪೂರ್ಣರು ಹಗಲೂರಾತ್ರಿ ಪ್ರಯಾಣ ಮಾಡಿ ಕಾಂಚೀಪುರವನ್ನು ತಲುಪಿದರು. ಯಾಮುನರ ದೇಹಸ್ಥಿತಿಯನ್ನು ವಿವರಿಸಿ, ಒಡನೆ ಬರುವಂತೆ ಬಿನ್ನವಿಸಿಕೊಂಡರು. "ಆ ಮಹಾತ್ಮರನ್ನು ನಾನು ದರ್ಶಿಸಲೇಬೇಕು" ಎಂದು ರಾಮಾನುಜರೂ ಕೂಡ ಆತುರಪಟ್ಟು ಹೊರಟರು. ಇಬ್ಬರೂ ಒಂದು ಸ್ವಲ್ಪವೂ ವಿಶ್ರಾಂತಿ ತೆಗೆದುಕೊಳ್ಳದೇ ಒಂದೇ ಸಮನೆ ಪ್ರಯಾಣ ಮಾಡಿ, ಶ್ರೀರಂಗವನ್ನು ತಲುಪಿದರು. ಅವರು ಅಲ್ಲಿನ ಕಾವೇರಿ ದಡವನ್ನು ತಲುಪಿದಾಗ, ಜನಗಳ ಗುಂಪೊಂದನ್ನು ಕಂಡರು. ಅದು ಯಾಮುನರ ಅಂತ್ಯಕ್ರಿಯೆಗೆ ಸೇರಿರುವ ಗುಂಪು ಎಂದು ತಿಳಿದುಬಂತು. ರಾಮಾನುಜರಿಗೆ ಸಹಿಸಲಾರದ ದುಃಖ ಉಂಟಾಯಿತು. ಯಾಮುನರ ದೇಹದ ದರ್ಶನವಾದರೂ ಸಿಕ್ಕಿತಲ್ಲ ಎಂದು, ಅವರ ಮುಂದೆ ಹೋಗಿ ನಮಸ್ಕರಿಸಿದರು. ನೋಡಿದರೆ ಅಲ್ಲೊಂದು ವಿಚಿತ್ರ ಕಾಣಿಸಿತು. ಯಾಮುನರ ಬಲಗೈಯ ಮೂರು ಬೆರಳುಗಳು ಮಡಿಸಿಕೊಂಡಿದ್ದವು. ಈ ವಿಚಾರವಾಗಿ ಅವರ ಶಿಷ್ಯರನ್ನು ವಿಚಾರಿಸಿದರು. ಅದನ್ನು ಕಂಡು ಅವರಿಗೂ ಆಶ್ಚರ್ಯವಾಯಿತು.

ಕಡೆಗೆ ರಾಮಾನುಜರು, "ಯಾಮುನರಿಗೆ ಕಡೆಯ ಆಸೆಗಳು ಏನಾದರೂ ಇದ್ದವೇ?" ಎಂದು ಕೇಳಿದರು. ಅವರು ಮೂರು ಕಾರ್ಯಗಳನ್ನು ಮಾಡಬೇಕೆಂದಿದ್ದರು, ಅದು ಕೈಗೂಡಲಿಲ್ಲ ಎಂದು ಶಿಷ್ಯರು ಹೇಳಿದರು. ಅವುಗಳೆಂದರೆ, 'ಶ್ರೀವೈಷ್ಣವ ಧರ್ಮದ ಪ್ರಚಾರ ಮಾಡಬೇಕು', 'ಭಗವಾನ್ ವೇದವ್ಯಾಸರ ಬ್ರಹ್ಮಸೂತ್ರಗಳಿಗೆ ವಿಶಿಷ್ಟಾದ್ವೈತ ತತ್ತ್ವದ ಅನುಸಾರವಾಗಿ ಭಾಷ್ಯವನ್ನು ಬರೆಯಬೇಕು', 'ಆಳ್ವಾರರ ಸಂಪ್ರದಾಯವನ್ನು ಪುನರುಜ್ಜೀವನಗೊಳಿಸಿ, ಅವರಿಗೆ ಪ್ರೀತಿಯ ಕಾಣಿಕೆಯನ್ನು ನೀಡಬೇಕು.' ರಾಮಾನುಜರು ಮೇಲಿನ ಮೂರೂ ಆಕಾಂಕ್ಷೆಗಳನ್ನು ತಾವು ಈಡೇರಿಸುವುದಾಗಿ ಪ್ರತಿಜ್ಞೆ ಮಾಡಿದರು. ಅವರು ಒಂದೊಂದು ಪ್ರತಿಜ್ಞೆಯನ್ನು ಮಾಡಿದಾಗಲೂ, ಯಾಮುನಾಚಾರ್ಯರ ಒಂದೊಂದು ಬೆರಳು ಬಿಚ್ಚಿಕೊಂಡಿತು. ಇದನ್ನು ಕಂಡ ಎಲ್ಲರಿಗೂ ಯಾಮುನರ ಅನುಗ್ರಹ ರಾಮಾನುಜರ ಮೇಲೆ ಪೂರ್ಣವಾಗಿ ಇದೆ ಎಂದು ಸ್ಪಷ್ಟವಾಯಿತು. ರಾಮಾನುಜರೇ ಶ್ರೀವೈಷ್ಣವ ಪರಂಪರೆಯ ಮುಂದಿನ ಆಚಾರ್ಯರು ಎಂದು ಅಲ್ಲಿ ನೆರೆದಿದ್ದವರೆಲ್ಲರೂ ಒಮ್ಮತದಿಂದ ತೀರ್ಮಾನಿಸಿದರು. ಹೀಗೆ ರಾಮಾನುಜರು 'ಆಚಾರ್ಯ'ರಾದರು. (ಮುಂದುವರೆಯುವುದು)



# ಛಾಯಾಚಿತ್ರಗಳಲ್ಲಿ ಸ್ವಾಮಿ ವಿವೇಕಾನಂದರು

ಕೆ. ಆರ್. ಮೋಹನ್

### ಛಾಯಾಚಿತ್ರ ೭೧

ಸ್ವಾಮಿ ವಿವೇಕಾನಂದರು ಕಾಶ್ಮೀರ ಪ್ರವಾಸದಲ್ಲಿದ್ದಾಗ ತೆಗೆದ ಚಿತ್ರ ಇದು. ಇದರಲ್ಲಿ ಇರುವವರ ಪರಿಚಯ ಹೀಗಿದೆ: ಎಡದಿಂದ, ಜೊಸೆಫಿನ್



ಚಿತ್ರ: ೭೧

ಮ್ಯಾಕ್ಲೌಡ್, ಸಾರಾ ಬುಲ್ (ಕುಳಿತವರು), ಸ್ವಾಮಿ ವಿವೇಕಾನಂದ, ಸೋದರಿ ನಿವೇದಿತಾ.

ಈ ಚಿತ್ರವನ್ನು ಸ್ವಾಮೀಜಿಯವರ ಪಾಶ್ಚಾತ್ಯ ಶಿಷ್ಯೆಯಾದ ಪಾಟರ್‌ಸನ್ ಎಂಬುವವಳು, ಆಗತಾನೇ ಆವಿಷ್ಕಾರಗೊಂಡಿದ್ದ ಬಾಕ್ಸ್ ಕ್ಯಾಮೆರಾದ ಮೂಲಕ ಸೆರೆಹಿಡಿದಿದ್ದಳು.

ಸೋದರಿ ನಿವೇದಿತಾ ಹೇಳುವಂತೆ, ಆಕಾಶದಲ್ಲಿನ ನೀಲ ವರ್ಣ, ವನಸ್ಪತಿಗಳ ಹರಿದ್ವರ್ಣ, ಹಿಮರಾಶಿಯ ಶ್ವೇತವರ್ಣ – ಇವು ಸಮರಸವಾಗಿ ಸೇರಿ ಕಾಶ್ಮೀರ ಕಣಿವೆಯ ಸೃಷ್ಟಿ ಸೌಂದರ್ಯವು ಸಾವಿರಮಡಿಯಾಗಿತ್ತು.


### ಛಾಯಾಚಿತ್ರ ೭೨

ಈ ಚಿತ್ರವನ್ನು ಅಮೆರಿಕದ ಅನಿಸ್ಕ್ವಾಮ್‌ನಲ್ಲಿ ತೆಗೆದದ್ದು ಎಂದು ತಪ್ಪಾಗಿ ಭಾವಿಸಲಾಗಿತ್ತು. ಹಾಗೆಯೇ ಇದು ಅಮೆರಿಕದಲ್ಲಿ ತೆಗೆದು ಮೊಟ್ಟಮೊದಲ ಚಿತ್ರವೆಂದು ಭ್ರಮಿಸಲಾಗಿತ್ತು. ಆದರೆ ಈಗ ಅದು ಸರಿಯಲ್ಲವೆಂದು ಗೊತ್ತಾಗಿದೆ. ಆಲ್ಮೋರಾದಲ್ಲಿದ್ದ ಖ್ಯಾತ ವಿಜ್ಞಾನಿ ಶ್ರೀ ಬೋಶಿ ಸೇನರ ಪತ್ನಿ ಶ್ರೀಮತಿ ಗರ್ಟ್ರೂಡ್ (Gertrude) ಮತ್ತು ಸ್ವಾಮಿ ಅಶೋಕಾನಂದಜಿ ಅವರ ನಡುವಿನ ಪತ್ರವ್ಯವಹಾರದಲ್ಲಿ ಸತ್ಯಾಂಶ ಗೊತ್ತಾಗಿದೆ. ಈ ಚಿತ್ರವನ್ನು ಸ್ವಾಮೀಜಿ ಕಾಶ್ಮೀರದಲ್ಲಿದ್ದಾಗ ತೆಗೆದದ್ದು ಎಂದು ಶ್ರೀಮತಿ ಸೇನ್, ಸ್ವಾಮಿ ಅಶೋಕಾನಂದರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಈ ಚಿತ್ರ ಬಹಳ ಮಸುಕಾಗಿದ್ದು, ಸ್ವಾಮೀಜಿಯವರನ್ನು ಗುರುತಿಸುವುದು ಸ್ವಲ್ಪ ಕಷ್ಟ.

### ಛಾಯಾಚಿತ್ರ ೭೩

ಈ ಚಿತ್ರವನ್ನು ತೆಗೆದದ್ದು ಕೂಡ ಕಾಶ್ಮೀರದಲ್ಲಿಯೇ. ಕಾಶ್ಮೀರದ ಅನಂತನಾಗ್‌ನಲ್ಲಿ ಸ್ವಾಮೀಜಿ ತಮ್ಮ ಶಿಷ್ಯರೊಂದಿಗೆ ಸೇಬಿನ ತೋಟವೊಂದರಲ್ಲಿ ಕುಳಿತು, ಅತ್ಯಂತ ಆತ್ಮೀಯವಾಗಿ ಮಾತನಾಡುತ್ತಿದ್ದರು. ಹಾಗೆಯೇ ತಮ್ಮ ವೈಯಕ್ತಿಕ ವಿಷಯಗಳ ಬಗ್ಗೆ ಹೇಳಿಕೊಂಡರು: "ಸಾವು ನನ್ನ ಬಳಿ ಸಾರಿದಾಗಲೆಲ್ಲ ನನ್ನೆಲ್ಲ ದೌರ್ಬಲ್ಯಗಳೂ ಮಾಯವಾಗಿಬಿಡುತ್ತವೆ. ಆಗ ನನಗೆ ಯಾವ ಭಯ ಸಂಶಯಗಳಾಗಲಿ, ಬಾಹ್ಯ ಪರಿಸರದ ಕಡೆಗೆ ಗಮನವಾಗಲಿ ಇರುವುದೇ ಇಲ್ಲ. ನಾನು ಆ ಸಂದರ್ಭದಲ್ಲಿ ಕೇವಲ ಸಾವಿನ ಸಿದ್ಧತೆಯಲ್ಲಿ ಮಗ್ನನಾಗಿಬಿಡುತ್ತೇನೆ. ನಾನು ಕಲ್ಲಿನಷ್ಟು ಗಟ್ಟಿ ಮನಸ್ಸುಳ್ಳವನಾಗಿದ್ದೇನೆ.



ಚಿತ್ರ: ೭೨